ಮೈಸೂರಿನಲ್ಲಿ ವಿಶೇಷವಾಗಿ ಯಾರಿಗೆ ಕೊಟ್ಟಿದ್ದೀರೆಂದರೆ ಆ ವಿವರ ಈಗ ಇಲ್ಲ. ಇಡೀ ರಾಜ್ಯದಲ್ಲಿ ಎಲ್ಲಿ ಉಮೆನ್ ಎಂಟರ್ ಪ್ರಿನರ್ಸ್‌ಗೆ ಬರುತ್ತವೆ ಅವಕ್ಕೆ ಸಬ್ಸಿಡಿ, ವರ್ಕಿಂಗ್ ಕ್ಯಾಪಿಟಲ್, ಡೆವಲಪ್‌ಮೆಂಟ್ ಲೋನ್‌ಗಳನ್ನು ಕೊಡುವುದಕ್ಕೆ ಒಂದೊಂದು ಕ್ಯಾಟಗರಿ ಮಾಡಿದ್ದೇವೆ. ಮೈಸೂರು ಬ್ಯಾಕ್‌ವರ್ಡ್ ಏರಿಯ ಅಲ್ಲ. ಜೋನ್ ಡಿಸೆಕ್ರಿಪ್‌ಷನ್ ಪ್ರಕಾರ ಬೆಂಗಳೂರು, ಮೈಸೂರು ಅಲ್ಲ. ಹೆಚ್ಚೆಚ್ಚು ಕಾರ್ಖಾನೆಗಳು ಅಲ್ಲಿ ಆಗುತ್ತಿರುವುದರಿಂದ ಮೈಸೂರಿನ ಮೇಯರ್ ಬಂದಾಗ ಮೈಸೂರಿಗೆ ಕಾರ್ಖಾನೆಗಳನ್ನು ಕೊಡಬೇಡಿ ಎಂದು ಹೇಳಿದರು. ವಿಕೇಂದರೆ ಅವರಿಗೆ ಬೇರೆ ನಾಗರೀಕ ಸರಬರಾಜುಗಳನ್ನು ಮಾಡುವುದು ಕಷ್ಟವಾಗುತ್ತದೆಂದು ಹೇಳಿದರು. ಮೈಸೂರು, ಬೆಂಗಳೂರು ಬಿಟ್ಟು ಬೀದರ್ ನೋ ಇಂಡಸ್ಟ್ರಿ ಡಿಸ್ಟ್ರಿಕ್ಟ್ ಎಂದು ಇದೆ. ಅಲ್ಲಿ ಸಿಗುವ ಸಪಲತ್ತು ಇಲ್ಲಿ ಸಿಗುವುದಿಲ್ಲ. ಉಮೆನ್ ಎಂಟರ್ ಪ್ರೆನ್ಯೂರ್ಸ್‌ಗೆ ಸ್ಪೆಷಲ್ ಆಗಿ ಇನ್‌ಸೆಂಟೀವ್ ಕನ್‌ಸೆಷನ್ಸ್ ಏನಿವೆ ಅವನ್ನು ಕೊಡುತ್ತಿದ್ದೇವೆ.

SMT. MUKTHARUNNISA.—My question was whether any reservation is there for women in the matter of distribution of industrial land and industrial sheds.

SRI J.H. PATEL.—There is no necessity to reserve. We will give to all of them. When there is any question of excess demand, then reservation question arises. We are doing everything for the women enterprenuers.

ಸರ್ಕಾರಿ ಮತ್ತು ಜಂಟಿ ವಲಯದಲ್ಲಿರುವ ಉದ್ದಿಮೆಗಳ ಬಗ್ಗೆ.

೪೦೨ ಶ್ರೀ ಪಿ. ಬೈರೇಗೌಡ.—ಮಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರ ಹಾಗೂ ಸರ್ಕಾರಿ ಮತ್ತು ಖಾಸಗಿಯವರ ಜಂಟಿ ವಲಯದಲ್ಲಿ ರಾಜ್ಯದಲ್ಲಿ ಸ್ಥಾಪನೆಯಾಗಿರುವ ಉದ್ದಿಮೆಗಳು ಯಾವುವು?

ಆ) ಕಳೆದ ಮೂರು ವರ್ಷಗಳಿಂದ ಈ ಉದ್ದಿಮೆ ಗಳಿಸಿರುವ ಲಾಭ ಅಥವಾ ನಷ್ಟವೆಷ್ಟು?

ಇ) ನಷ್ಟವಾಗಿದ್ದರೆ ಅದಕ್ಕೆ ಕಾರಣವೇನು?

ಈ) ನಷ್ಟದಲ್ಲಿ ನಡೆಯುವ ಕೈಗಾರಿಕೆಗಳನ್ನು ಲಾಭದಾಯಕವಾಗಿ ನಡೆಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳು ಯಾವುವು?

ಉ) ಈ ಉದ್ದಿಮೆಗಳನ್ನು ಮಾರಾಟ ಮಾಡುವ ಅಥವಾ ಖಾಸಗಿಯವರಿಗೆ ವಹಿಸುವ ವಿಚಾರವೇನಾದರೂ ಸರ್ಕಾರದ ಮುಂದಿದೆಯೇ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೧ ಕರ್ನಾಟಕ ಗೇರು ಬೀಜ ಅಭಿವೃದ್ಧಿ ನಿಗಮ ನಿಯಮಿತ
೨ ಕರ್ನಾಟಕ ಕಾಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್
೩ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
೪ ಕರ್ನಾಟಕ ವಿಮಾನಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ
೫ ಕರ್ನಾಟಕ ಅರಣ್ಯ ನೆಡುತೋಪುಗಳ ನಿಗಮ ನಿಯಮಿತ
೬ ಕರ್ನಾಟಕ ಕೈಮಗ್ಗದ ಅಭಿವೃದ್ಧಿ ನಿಗಮ ನಿಯಮಿತ
೭ ಕರ್ನಾಟಕ ಚರ್ಮ ಕೈಗಾರಿಕೋದ್ಯಮಗಳ ನಿಗಮ ನಿಯಮಿತ
೮ ಕರ್ನಾಟಕ ರಾಜ್ಯ ವಿದ್ಯುತ್ ಉಪಕರಣಗಳ ಅಭಿವೃದ್ಧಿ ನಿಗಮ ನಿಯಮಿತ
೯ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ
೧೦ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.

೧೧ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ
೧೨ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
೧೩ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್
೧೪ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
೧೫ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
೧೬ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್
೧೭ ಕರ್ನಾಟಕ ಭೂ ಸೇನಾ ನಿಗಮ ನಿಯಮಿತ
೧೮ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ನಿಗಮ ನಿಯಮಿತ
೧೯ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ ನಿಯಮಿತ
೨೦ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
೨೧ ಶ್ರೀ ಕಂಠೀರವ ಸ್ಟುಡಿಯೋಸ್ ಲಿಮಿಟೆಡ್
೨೨ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
೨೩ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೨೪ ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮ ನಿಯಮಿತ
೨೫ ಮಾರ್ಕೆಟಿಂಗ್ ಕನ್‌ಸಲ್ಟೆಂಟ್ಸ್ ಅಂಡ್ ಎಜೆನ್ಸೀಸ್ ಲಿಮಿಟೆಡ್
೨೬ ಬೆಂಗಳೂರು ಅನಿಮಲ್ ಫುಡ್ ಕಾರ್ಪೊರೇಷನ್
೨೭ ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್
೨೮ ಹಟ್ಟಿ ಚಿನ್ನದ ಗಣಿ ನಿಗಮ ನಿಯಮಿತ

೧ ಚಿತ್ರದುರ್ಗ ಕಾಪರ್ ಕಂಪೆನಿ ಲಿ.
೨ ಕರ್ನಾಟಕ ಕಾಪರ್ ಕನ್‌ಸ್ಟ್ರೋಯಿಯಂ ಲಿ.

೨೯ ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮೆಷನರೀಸ್ ಕಂಪೆನಿ ಲಿಮಿಟೆಡ್
೩೦ ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ್ ಲಿಮಿಟೆಡ್
೩೧ ಕರ್ನಾಟಕ ವಿದ್ಯುತ್ ಕಾರ್ಖಾನೆ ಲಿಮಿಟೆಡ್
೩೨ ಕರ್ನಾಟಕ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್
೩೩ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್.
೩೪ ಮೈಸೂರು ಕಾಸ್ಟಿಟಿಕ್ಸ್ ಲಿಮಿಟೆಡ್
೩೫ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
೩೬ ಮೈಸೂರು ಅರಗು ಮತ್ತು ಬಣ್ಣಗಳ ಕಾರ್ಖಾನೆ ನಿಯಮಿತ
೩೭ ಮೈಸೂರು ಮಿನರಲ್ಸ್ ಲಿಮಿಟೆಡ್
೩೮ ಮೈಸೂರು ಕಾಗದದ ಕಾರ್ಖಾನೆ ನಿಯಮಿತ
೩೯ ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ
೪೦ ಮೈಸೂರು ಟೊಬ್ಯಾಕೋ ಕಂಪೆನಿ ಲಿಮಿಟೆಡ್
೪೧ ಎನ್.ಜಿ.ಇ.ಎಫ್. ಲಿಮಿಟೆಡ್
೪೨ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ನಿಯಮಿತ
೪೩ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
೪೪ ಕರ್ನಾಟಕ ರಾಜ್ಯ ವೀನಿಯರ್ಸ್
೪೫ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿ ಲಿಮಿಟೆಡ್
೪೬ ಕರ್ನಾಟಕ ರಾಜ್ಯ ಹಣಕಾಸು ನಿಗಮ ನಿಯಮಿತ
೪೭ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
೪೮ ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ
೪೯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ
೫೦ ಮೈಸೂರು ಅಸಿಟೇಟ್ಸ್ ಅಂಡ್ ಕೆಮಿಕಲ್ಸ್ ಕಂಪೆನಿ ಲಿಮಿಟೆಡ್

೫೧ ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್
೫೨ ಮೈಸೂರು ಲ್ಯಾಂಪ್ ವರ್ಕ್ಸ್.

ಜಂಟಿ ವಲಯದಲ್ಲಿರುವ ಉದ್ದಿಮೆಗಳು

೧ ವಿಶಾಲಾಕ್ಷಿ ಸುಂದರಂ ಟೆಕ್ಸ್‌ಟೈಲ್ಸ್
೨ ಮೈಸೂರು ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್
೩ ಕರ್ನಾಟಕ ಆಕ್ಸಿಜನ್ ಲಿಮಿಟೆಡ್
೪ ಕರ್ನಾಟಕ ಸ್ಮೆಲ್ಟರ್ಸ್ ಲಿಮಿಟೆಡ್
೫ ಗಂಗಾವತಿ ಸುಗರ್ಸ್
೬ ಕರ್ನಾಟಕ ವುಲ್ಲನ್ಸ್
೭ ವಿಲ್‌ಟೆಕ್
೮ ತುಂಗಭದ್ರ ಫೈಬರ್
೯ ಕರ್ನಾಟಕ ಪಾಲಿಪ್ರಾಡಕ್ಟ್ಸ್
೧೦ ಇಂಟರ್ ಮಾಡಲ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್ಸ್
೧೧ ಪ್ರಿಸೆಮಾ ಫೈನ್ ಕೆಮಿಕಲ್ಸ್ ಮತ್ತು ಫಾರ್ಮಸಿಟಿಕಲ್ಸ್
೧೨ ಕರ್ನಾಟಕ ಹಾರಲಾಜಿಕಲ್ಸ್
೧೩ ಕೋಲಾರ ವುಲ್ಲನ್ಸ್ ಲಿಮಿಟೆಡ್.

೮)

ವರ್ಷ	ಲಾಭದಲ್ಲಿರುವ			ನಷ್ಟದಲ್ಲಿರುವ			
	ಸರ್ಕಾರಿ ಉದ್ದಿಮೆಗಳ ಸಂಖ್ಯೆ	ಮೊತ್ತ (ರೂ. ಲಕ್ಷಗಳು)	ಜಂಟಿ ವಲಯದಲ್ಲಿರುವ ಉದ್ದಿಮೆಗಳ ಸಂಖ್ಯೆ	ಮೊತ್ತ (ರೂ. ಲಕ್ಷಗಳು)	ಸರ್ಕಾರಿ ಉದ್ದಿಮೆಗಳ ಸಂಖ್ಯೆ	ಮೊತ್ತ (ರೂ. ಲಕ್ಷಗಳು)	ಜಂಟಿ ವಲಯದಲ್ಲಿರುವ ಉದ್ದಿಮೆಗಳ ಸಂಖ್ಯೆ	ಮೊತ್ತ (ರೂ. ಲಕ್ಷಗಳು)
೧೯೮೨-೮೩	೨೭	೪೩.೨೮	೨	೫೬.೯೨	೨೭	೪೬.೮೪	೬	೧೫೮.೩೦
೧೯೮೩-೮೪	೨೫	೨೮.೫೦	೩	೫೧.೫೩	೨೯	೬೦.೨೨	೫	೨೬೬.೦೬
೧೯೮೪-೮೫	೨೮	೨೭.೬೭	೩	೨೨.೪೨	೨೪	೮೫.೩೬	೩	೯೮.೬೪

ಇ) ೧) ರಾಜ್ಯ ಕೈಗಾರಿಕೆಗಳ ಉತ್ಪನ್ನಗಳಿಗೆ ಅನ್ವಯಿಸುವ ಆಮದು ನೀತಿ ಹಾಗೂ ದರ ನಿಗದಿಗೊಳಿಸುವಿಕೆ.

೨) ವಿದ್ಯುಚ್ಛಕ್ತಿಯನ್ನು ಅಧಿಕವಾಗಿ ಬಿತಿಗೊಳಿಸುವಿಕೆ ಹಾಗೂ ಸರಬರಾಯಿ ಆಗುವ ವಿದ್ಯುಚ್ಛಕ್ತಿಗೆ ಹೆಚ್ಚಿನ ದರ ಕೊಡುವಿಕೆ ಈ ಕಾರಣಗಳಿಂದಾಗಿ ರಾಜ್ಯ ಉತ್ಪನ್ನಗಳ ಬೆಲೆ ಹೆಚ್ಚುವುದು, ಹಾಗೂ ಉತ್ಪನ್ನಗಳು ಕಡಿಮೆಯಾಗುವುದು.

೩) ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಉತ್ಪನ್ನಗಳನ್ನು ತಯಾರಿಸಿ ಅವುಗಳನ್ನು ಮಾರಾಟ ಮಾಡಲು ಸೌಲಭ್ಯಗಳು ಇಲ್ಲದೆ ಇರುವ ಕಾರಣ ತುಲನಾತ್ಮಕ ಮಾರುಕಟ್ಟೆಯಲ್ಲಿ ರಾಜ್ಯ ಕೈಗಾರಿಕೆಗಳ ಸೋಲು.

೪) ಉತ್ಪಾದನಾ ಶಕ್ತಿ ಇಲ್ಲದ ವಸ್ತುಗಳ ಮೇಲೆ ಅಧಿಕ ಬಂಡವಾಳ ಹೂಡುವಿಕೆ ಇರುವ ಶಕ್ತಿ ಸಾಮರ್ಥ್ಯವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಲಾಗದೆ ಇರುವುದು.

೫) ದುಡಿಯುವ ಬಂಡವಾಳ ಇಲ್ಲದೆ ಇರುವುದು ಹಾಗೂ ಸಕಾಲದಲ್ಲಿ ಈ ಬಂಡವಾಳ ಇಲ್ಲದಿರುವಿಕೆ.

೬) ಹಳೆಯದಾದ ಯಂತ್ರೋಪಕರಣಗಳ ಉಪಯೋಗಿಸುವಿಕೆಯಿಂದ ಅಧಿಕ ಬೆಲೆಯ ಕಳಪೆದರ್ಜೆಯ ವಸ್ತುಗಳ ತಯಾರಿಕೆ.

೭) ಬೇಕಾಗಿರುವುದಕ್ಕಿಂತ ಹೆಚ್ಚಿನ ಉದ್ಯೋಗಿಗಳ ನೇಮಕಾತಿಯು ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸುವುದು ಈ ಕಾರಣದಿಂದ ಅವುಗಳ ಬೆಲೆ ಸ್ಪರ್ಧಾತ್ಮಕವಾಗಿ ಇಲ್ಲದಿರುವುದು.

೮) ಸರ್ಕಾರದ ಘೋಷಿತ ನೀತಿಯಂತೆ ಸಾರ್ವಜನಿಕ ಸೇವೆಯ ಕೆಲವೊಂದು ಕ್ಷೇತ್ರಗಳಲ್ಲಿ ಲಾಭವಿಲ್ಲದೆ ನಡೆಸುವ ಕಾರ್ಯಾಚರಣೆ ಹಳ್ಳಿ ಪ್ರದೇಶಗಳಲ್ಲಿ ಕರ್ನಾಟಕ ರಾಜ್ಯ ವಿದ್ಯುತ್ ಮಂಡಳಿಯು ಕಡಿಮೆ ಬೆಲೆಯಲ್ಲಿ ವಿದ್ಯುಚ್ಛಕ್ತಿ ಪೂರೈಸುವುದು.

೯) ಸರ್ಕಾರದ ಘೋಷಿತ ನೀತಿಯಂತೆ ಸಾಮಾಜಿಕ ಹಾಗೂ ಆರ್ಥಿಕ ಉದ್ದೇಶಗಳಿಗೆ ಮಹತ್ವ ನೀಡುವ ಸಲುವಾಗಿ ಸ್ಥಾಪಿಸಿದ ಅಭಿವೃದ್ಧಿ ಉದ್ಯಮಗಳಿಂದ

(Developmental enterprises)

ಹಳ್ಳಿಗಾಡಿನ ಯುವಜನರಿಗೆ ಉದ್ಯೋಗವನ್ನು ಒದಗಿಸಲು ಹಿಂದುಳಿದ ಜನಾಂಗದ ಉದ್ದಿಮೆ ಗಾರರಿಗೆ ಸಹಾಯ ನೀಡುವಿಕೆ.

ಈ) ೧ ಈ ಕೈಗಾರಿಕೆಗಳ ಪರವಾಗಿ ಸರಿಯಾದ ದರ ನಿಗದಿಗೊಳಿಸಲು ಹಾಗೂ ಆವಂದು ನೀತಿ ಯಲ್ಲಿ ಬೇಕಾದ ತಿದ್ದುಪಡಿಗಳನ್ನು ಸೂಚಿಸಿ ಮನವಿಯನ್ನು ಕೇಂದ ಸರ್ಕಾರಕ್ಕೆ ಕಳುಹಿಸುವುದು.

೨ ಯೋಗ್ಯವಾದ ಕೈಗಾರಿಕೆಗಳ ಉತ್ಪನ್ನಗಳು ಚೆನ್ನಾಗಿದ್ದ ಪಕ್ಷದಲ್ಲಿ ಅವುಗಳಿಗೆ ಹೆಚ್ಚುವರಿ ದರ (Price preference) ನೀಡುವುದು ಮಂತ್ರ ಈ ಕೈಗಾರಿಕೆಗಳಿಂದ ಉತ್ಪನ್ನಗಳನ್ನು ಸರ್ಕಾರಿ ಉಪಯೋಗಗಳಿಗೆ ಕೊಳ್ಳುವಿಕೆ (Purchase preference)

೩ ಬಂಡವಾಳ ಹಾಗೂ ಸಾಲ ರೂಪವಾಗಿ ಹಣ ನೀಡುವಿಕೆ.

೪ ಕಾಲಕ್ಕೆ ಸರಿಯಾಗಿ ಕ್ರಮ ಕೈಗೊಳ್ಳಲು ವಿಧಿಪತ್ಯಾಗಿ ಕೈಗಾರಿಕೆಗಳ ಪರಿಶೀಲನೆ ನಡೆಸಲು ಬೇಕಾದ ನೀತಿಗಳು ಹಾಗೂ ಪ್ರಭಾವಶಾಲಿಯಾಗಿ ಮಾರುಕಟ್ಟೆಯಲ್ಲಿ ಉತ್ಪನ್ನಗಳ ವಿತರಣೆ ಹಾಗೂ ಬೇಡಿಕೆಗೆ ಅನುಗುಣವಾಗಿ ಉತ್ಪನ್ನಗಳಲ್ಲಿ ವಿವಿಧ ಬದಲಾವಣೆ.

ಉ) ಇನ್ನೂ ಪರಿಶೀಲನೆಯಲ್ಲಿದೆ.

ಶ್ರೀ ಸಿ. ಬೈರೇಗೌಡ.—ನನ್ನ ಈ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಇಲ್ಲೇ ಕೊಟ್ಟುಬಿಡುತ್ತೇನೆ.

ಅಧ್ಯಕ್ಷರು.—ನಿಮಗೆ ಇಲ್ಲೇ ಉತ್ತರ ಕೊಟ್ಟರೂ ತಿಳಿದುಕೊಳ್ಳುವ ಶಕ್ತಿ ಇದೆ.

ಶ್ರೀ ಜೆ. ಹೆಚ್. ಪಟೇಲ್.—ಈ ತರಹದ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸುವುದು ಕಷ್ಟವಾಗುತ್ತದೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಶಹಬಾದ್‌ನಲ್ಲಿ ಎಷ್ಟು ಕಲ್ಲುಬಂಡೆಗಳು ಇವೆ ಎಂದು ಕೇಳಿದ ಹಾಗೆ ಆಗುತ್ತದೆ.

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.—ಕಲ್ಲು ಬಂಡೆ ಅಲ್ಲ. ಪ್ರಿಂಟಿಂಗ್ ಮಿಸ್ಟೇಕ್ ಇದೆ. ಸದಸ್ಯರು ಹೀಗೆ ಕೇಳಿದರು ಎಂದರೆ ಹೇಗೆ ?

ಶ್ರೀ ಜೆ. ಹೆಚ್. ಪಟೇಲ್.—ಸರ್ಕಾರ ಕಲ್ಲು ಬಂಡೆ ಹಾಗೆ ಇದೆ ಎಂದು ಗೊತ್ತಾಗಿದೆಯೆ ?

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಉತ್ತರ ಕೊಟ್ಟಷ್ಟಪಕ್ಷ ೧೫ ಪುಟ ಆಗುತ್ತದೆ. The rules which goven the admissibility of questions will not permit admission of such a question. ಸರ್ಕಾರಿ, ಖಾಸಗಿ ಮತ್ತು ಜಂಟಿ ವಲಯದಲ್ಲಿ ರಾಜ್ಯದಲ್ಲಿ ಸ್ಥಾಪಿತವಾಗಿರುವ ಉದ್ಯಮಗಳು ಯಾವುವು ? ಯಾವಾಗ ? ಎಲ್ಲಿಯವರೆಗೆ ? ಎಂದು ಕೇಳಿದ್ದಾರೆ. ರಾಜ್ಯದಲ್ಲಿರುವ ಕಾಗೆಗಳ ಸಂಖ್ಯೆ ಎಷ್ಟುಎಂದು ಹೇಳಿದರೆ ನಾನು ಏನು ಮಾಡಲಿ ? ಸ್ಥಾಪಿತವಾಗಿರುವ ಉದ್ಯಮಗಳು ಯಾವುವು ಎಂಬುದು ಉತ್ತರ ಎರಡು ಪುಟ ಇದೆ. ಕಾಪಿ ಕೊಡುತ್ತೇನೆ. ೫೨ ಕಾರ್ಖಾನೆಗಳು ಒಂದು ವರ್ಗದಲ್ಲಿ ಬರುತ್ತದೆ. ೧೫ ಕಾರ್ಖಾನೆಗಳು ಜಂಟಿ ವಲಯದಲ್ಲಿ ಬರುತ್ತವೆ. ಮುಂದಿನ ಪ್ರಶ್ನೆ ಅವುಗಳ.. ...

ಒಬ್ಬ ಮಾನ್ಯ ಸದಸ್ಯರು.—ಕಾಗೆಗಳ ಲೆಕ್ಕ ಕೊಡಬಹುದಿತ್ತು.

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.—ಪ್ರಶ್ನೆಯೂ ಸರ್ಕಾರದ್ದು. ಉತ್ತರವೂ ಸರ್ಕಾರದ್ದು.

ಅಧ್ಯಕ್ಷರು.—ಈ ಸಲ ಅವರಿಗೆ ಸರ್ಟಿಫಿಕೇಟ್ ಕೊಡೋಣ.

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.—ಬೈರೇಗೌಡರನ್ನು ಬಿಟ್ಟಿದ್ದೇ ನಿಮಗೆ ತೊಂದರೆ ಕೊಡುತ್ತಿದೆ. ಅವರನ್ನು ಸುಮ್ಮನೆ ಇಟ್ಟುಕೊಂಡಿದ್ದರೆ ಇಷ್ಟು ತೊಂದರೆಯ ಪ್ರಶ್ನೆಯೇ ಕೇಳುತ್ತಿರಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್—ಅವುಗಳಲ್ಲಿ ಲಾಭದಲ್ಲಿ ಎಷ್ಟು ಇವೆ. ನಷ್ಟದಲ್ಲಿ ಎಷ್ಟು ಇವೆ. ಖಾಸಗಿ ವಲಯದಲ್ಲಿ, ಜಂಟಿ ವಲಯದಲ್ಲಿ, ಸಹಕಾರಿ ವಲಯದಲ್ಲಿ ಇರತಕ್ಕಂಥ ಉದ್ಯಮಗಳು ಒಟ್ಟು ಎಷ್ಟು ನಷ್ಟದಲ್ಲಿವೆ ಎಂದರೆ ಖಾಸಗಿಯವರದು ನನಗೆ ಹೇಗೆ ಗೊತ್ತಾಗಬೇಕು. ಬಿಲ್ಲಾ ಅಂಡ್ ಕಂಪನಿಯವರದು ಲುಕ್ಸಾನು ಆಗಿದೆಯೋ ಲಾಭದಲ್ಲಿ ಇದೆಯೋ ? There are certain possibilities for the Government to get the information. ನಷ್ಟವಾಗಿದ್ದರೆ ಅದಕ್ಕೆ ಕಾರಣ ವೇನು ? ಈ ರೀತಿ...

ಶ್ರೀ ಎಂ. ಎಸ್. ಕೃಷ್ಣನ್.—ಲಿಜಿಸ್ಲೇಟರ್ಸ್‌ನ್ನು ಸೇರಿಸಿ ಟ್ರೈನಿಂಗ್ ಕ್ಯಾಂಪ್ ತೆಗೆಯಬೇಕು.

ಶ್ರೀ ಜೆ. ಹೆಚ್. ಪಟೇಲ್.—ಅದ್ದರಿಂದ ತಪ್ಪು ಅಪ್ಪಣೆ ಪಡೆದು ಕಾಪಿಯನ್ನು ಅವರಿಗೆ ಕೊಡುತ್ತೇನೆ. ಉತ್ತರವನ್ನು ಓದುವುದಕ್ಕಾಗುವುದಿಲ್ಲ. ಅವರಿಗೂ ಒಂದು ದಿವಸ ಬೇಕಾಗುತ್ತದೆ. ಅದಕ್ಕೆ ಏನಾದರೂ ಕ್ಲಾರಿಫಿಕೇಷನ್ ಬೇಕಾದರೆ...

ಶ್ರೀ ಸಿ. ಬೈರೇಗೌಡ.—ದಯವಿಟ್ಟು ಕೇಳಿ. ಇದನ್ನು ಕೇಳಿರತಕ್ಕಂಥ ಉದ್ದೇಶ ಇವತ್ತು ಕೈಗಾರಿಕಾ ರಂಗದಲ್ಲಿ ನಷ್ಟವಾಗುತ್ತಿದ್ದರೂ ಸರ್ಕಾರದವರು ಯಾವರೀತಿ ಹಣದ ಉತ್ತೇಜನ ಕೊಡುತ್ತಿದ್ದಾರೆ ಮತ್ತು ವ್ಯವಸಾಯ ರಂಗದಲ್ಲಿ ಏನು ಉತ್ತೇಜನ ಕೊಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಇದು ಅತೀ ಅವಶ್ಯಕವಾಗಿರತಕ್ಕಂಥ ಮಾಹಿತಿ ನಮಗೆ ಬೇಕಾಗಿದೆ. ಆ ಉದ್ದೇಶದಿಂದ ನಾನು ಪ್ರಶ್ನೆಯನ್ನು ಕೇಳಿದ್ದೇನೆಯೇ ವಿನಹಾ ಕಾಗೆಗಳನ್ನು ಎಣಿಸಿ ಇನ್ನೊಂದು ಎಣಿಸಿ ಎನ್ನುವ ಉದ್ದೇಶದಿಂದ ನಾನು ಪ್ರಶ್ನೆಯನ್ನು ಕೇಳಲಿಲ್ಲ ನಾನು ಕೇಳುತ್ತಿರತಕ್ಕಂಥದ್ದು ಸರ್ಕಾರಿ ರಂಗದಲ್ಲಿ ಮತ್ತು ಜಾಯಿಂಟ್ ಸೆಕ್ಟಾರ್‌ನಲ್ಲಿ ಎಂದು ಕೇಳಿದ್ದೆ. ನಾನು ಖಾಸಗಿಯವರ ಪ್ರಶ್ನೆಯನ್ನು ಕೇಳಿಲ್ಲ ಪ್ರಶ್ನೆಯನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ. ಸರ್ಕಾರಿ ರಂಗದಲ್ಲಿ ಮತ್ತು ಜಾಯಿಂಟ್ ಸೆಕ್ಟಾರ್‌ನಲ್ಲಿ ಒಟ್ಟು ಎಷ್ಟು ಹಣ ನಷ್ಟವಾಗುತ್ತದೆ. ಸರ್ಕಾರ ಕೊಡುತ್ತಿರತಕ್ಕಂಥ ಉತ್ತೇಜನವನ್ನು ಅದೇ ರೀತಿಯಲ್ಲಿ ವ್ಯವಸಾಯ ರಂಗದಲ್ಲೂ ಕೊಡುತ್ತೀರೇನು ಎನ್ನುವ ಉದ್ದೇಶದಿಂದ ಅದನ್ನು ತಿಳಿದುಕೊಳ್ಳಬೇಕು ಎಂದು ಕೇಳಿದ್ದೆ. ಅದನ್ನು ಸಂಕ್ಷಿಪ್ತವಾಗಿ ತಿಳಿಸಿದ್ದರೂ ಸಾಕಾಗುತ್ತಿತ್ತು. ಯಾವುದನ್ನು ಸಹಾ ತಿಳಿಸುವ ಮಟ್ಟದಲ್ಲಿ ವರ್ಮಿತ್ರಿಗಳು ಇಲ್ಲ.

ಶ್ರೀ ಜೆ. ಹೆಚ್. ಪಟೇಲ್. —ಇಲ್ಲಿ ಇಂಡಸ್ಟ್ರಿಯಲ್ ಸೆಕ್ಟಾರ್‌ಗೆ ಏನು, ಅಗ್ರಿಕಲ್ಚರ್ ಸೆಕ್ಟಾರ್‌ಗೆ ಏನು, ಇದು ಚರ್ಚೆಗೆ ಅರ್ಹವಾಗಿರತಕ್ಕಂಥ ವಿಷಯ. ಬೇರೆ ನಿಯಮದ ಪ್ರಕಾರ ಚರ್ಚೆಗೆ ತರಲಿ. ಈಗ ಒಂದು ಶಬ್ದದಲ್ಲಿ ಅಥವಾ ಒಂದು ವಾಕ್ಯದಲ್ಲಿ ಹೇಳುತ್ತೇನೆ ಇಂಡಸ್ಟ್ರಿಯಲ್ ಸೆಕ್ಟಾರ್‌ಗೆ ಏನು ಅಗ್ರಿಕಲ್ಚರ್ ಸೆಕ್ಟಾರ್‌ಗೆ ಏನು ಎಂಬುದರ ಬಗ್ಗೆ. ಜಾಯಿಂಟ್ ಸೆಕ್ಟಾರ್‌ನಲ್ಲಿ ಇರತಕ್ಕಂಥ ಲಾಭ ನಷ್ಟದ ಬಗ್ಗೆ ಒಟ್ಟು ರಿಪೋರ್ಟ್ ಏನು ಇದೆ, ಅಷ್ಟನ್ನೂ ಓದುವುದಕ್ಕೆ ಆಗುವುದಿಲ್ಲ, ಈ ಕಾಪಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು. —ಮುಂದಿನ ಪ್ರಶ್ನೆ ಶಾಣಪ್ಪನವರದು. ಕೇಳ್ರಿ ನಿಮ್ಮ ಪ್ರಶ್ನೆ.

ಶ್ರೀ ಕೆ. ಬಿ. ಶಾಣಪ್ಪ.—ಅಧ್ಯಕ್ಷರೇ, ನಾನು ೨೦ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಜೆ ಹೆಚ್. ಪಟೇಲ್. —ಮಾನ್ಯ ಅಧ್ಯಕ್ಷರೇ, ನಾಳೆ ಉತ್ತರ ಕೊಡುತ್ತೇನೆ.

ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ.—ಎಲ್ಲಾ ಕಡೆ ಇದೇ ಪ್ರಾಬ್ಲಮ್. ಈಗಾಗಲೇ ಹೇಳಿದ ಹಾಗೆ ಆರ್.ಇ.ಸಿ. ಪ್ರೋಗ್ರಾಮ್...

ಶ್ರೀ ಜೆ. ಹೆಚ್. ಪಟೇಲ್.—ಇದು ವಿವರಗಳ ಪ್ರಶ್ನೆ. ರಾಜ್ಯದಲ್ಲಿ ಎಷ್ಟು ತಾಂಡಾಗಳು ಮತ್ತು ಕೊಪ್ಪಲುಗಳು ಇವೆ, ಅವುಗಳಿಗೆ ವಿದ್ಯುತ್ ಪೂರೈಕೆ ಆಗಿದೆಯೇ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಒಟ್ಟು ತಾಂಡಾಗಳು ಇವೆ, ಮತಕ್ಷೇತ್ರಕ್ಕೆ ವಿದ್ಯುತ್ ಪೂರೈಕೆ ಆಗಿದೆಯೇ ? ಇದರಿಂದ ಇದು ಬಹಳ ವಿವರಣಾತ್ಮಕವಾದ...

ಶ್ರೀ ಕೆ. ಬಿ. ಶಾಣಪ್ಪ.—ಅಧ್ಯಕ್ಷರೇ, ನಾನು ಇದರಲ್ಲಿ ಒಂದೇ ಒಂದು ವಿಚಾರವನ್ನು ಸದನದಲ್ಲಿ ಮತ್ತೊಮ್ಮೆ ಕೇಳಬಯಸುತ್ತೇನೆ. ೧೯೮೬-೮೭ರಲ್ಲಿ ಈ ಕೆಲವು ತಾಂಡಾಗಳನ್ನು ಗುಲ್ಬರ್ಗದಲ್ಲಿ ತೆಗೆದುಕೊಳ್ಳಬೇಕು ಎಂದು ತಂದಿದ್ದೀರಿ. ಲಿಸ್ಟನ್ನು ಕಳುಹಿಸಿದ್ದೀರಿ. ಸುಮಾರು ೨೪ ತಾಂಡಾಗಳನ್ನು ೧೯೮೬-೮೭ರಲ್ಲಿ ತೆಗೆದುಕೊಳ್ಳಬೇಕು ಎಂದು ಬಂತು. ಅದು ಪ್ರತ್ಯೇಕವಾಗಿ ಆರ್.ಇ.ಸಿ. ಸ್ಕೀಮ್ ಮೇಲೆ ತೆಗೆದುಕೊಳ್ಳಬೇಕೆಂದು ಹೋದ ಸದನದಲ್ಲಿ ಹೇಳಿದ್ದೀರಿ. ನನಗೆ ತಿಳಿದಮಟ್ಟಿಗೆ ೧೯೮೬ರಲ್ಲಿ ಗುಲ್ಬರ್ಗಾದು ಚಿತ್ತಾಪುರದಲ್ಲಿ ಉಳಿದ ೧೨ ಕಾನ್‌ಸಿಟ್ಯೂಟೆನ್ಸಿಗಳನ್ನು ಬಿಟ್ಟು ಬರೀ ಒಂದು ಕಾನ್‌ಸಿಟ್ಯೂಟೆನ್ಸಿಯಲ್ಲಿ ೨೪ ತಾಂಡಾಗಳನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರ ಅಥವಾ ಬೋರ್ಡ್‌ನವರು ಯಾವ ಆಧಾರದ ಮೇಲೆ ಕಳುಹಿಸಿದ್ದಾರೆ ? Why not have in all the Constituencies in Gulbarga ? This is the thing which I wanted to get it cleared from the concerned Minister.

ಶ್ರೀ ಜೆ. ಹೆಚ್. ಪಟೇಲ್.—ವಿವರಗಳು ಬಂದಿಲ್ಲ. ತಮ್ಮನ್ನು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಕೊಡುತ್ತೇನೆ,

ಅಧ್ಯಕ್ಷರು.— ಆಬ್ಸೆಂಟ್ ಇದ್ದವರನ್ನು ಇನ್ನೊಮ್ಮೆ ಕರೆಯುತ್ತೇನೆ. ಸಿದ್ದನಗೌಡ ಅವರು ಮತ್ತೆ ಆಬ್ಸೆಂಟ್ ಆಗಿದ್ದಾರೆ. ಶ್ರೀ ಜಮಖಂಡಿಯವರೂ ಮತ್ತೊಮ್ಮೆ ಆಬ್ಸೆಂಟ್ ಆಗಿದ್ದಾರೆ. ನೆಕ್ಸ್ಟ್ ಶ್ರೀ ವಂತಿ ಮುಂಕ್ಯಾರುನ್ನೀಸಾ.

ಇತ್ತೀಚಿನ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಯುರೇನಿಯಂ ನಿಕ್ಷೇಪಗಳು ದೊರೆಯುವ ಬಗ್ಗೆ.

೪೧೧. ಶ್ರೀಮತಿ ಮುಂಕ್ಯಾರ್ ಉನ್ನೀಸಾ.—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚಿನ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದ ಯಾವ ಯಾವ ಭಾಗಗಳಲ್ಲಿ ಯುರೇನಿಯಂ ನಿಕ್ಷೇಪಗಳನ್ನು ಪತ್ತೆ ಹಿಡಿಯಲಾಗಿದೆ ?

ಆ) ಸಮೀಕ್ಷೆಯ ಪ್ರಕಾರ ಎಷ್ಟು ಪ್ರಮಾಣ ಖನಿಜಗಳು ಸಿಗುತ್ತದೆ ?

ಇ) ಪ್ರಸಕ್ತ ಏಳನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸರ್ಕಾರವು ಖನಿಜಗಳನ್ನು ಶಾಂತಿಯುತವಾಗಿ ಬಳಸಲು ಯೋಚಿಸಲಾಗುತ್ತಿದೆಯೇ ?